# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ
## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.22/2021**

**ದೋ.ಸಾ. : 15 ಪ್ರಾ.ಸಾ. : 05**

| | | |
|---|---|---|
| ಸಾಕ್ಷಿಯ ಹೆಸರು | : | ಅಂಜುಂ ಮಹಮ್ಮದ್ ಅಜುರುದ್ದಿನ್ ಶೇಖ್ |
| ಗಂಡನ ಹೆಸರು | : | ಮಹಮ್ಮದ್ ಅಜುರುದ್ದಿನ್ ಶೇಖ್ |
| ವಯಸ್ಸು | : | 25 ವರ್ಷ |
| ಕೆಲಸ | : | ಗೃಹಿಣಿ |
| ವಾಸ | : | ಜನತಾ ಕಾಲೋನಿ, ಚಂದಾವರ, ತಾಃ ಹೊನ್ನಾವರ |

**ದಿನಾಂಕಃ 13-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1. ಚಾಸಾ-10 ನನ್ನ ಗಂಡ, ಅವರೊಂದಿಗೆ ನನ್ನ ಮದುವೆಯಾಗಿ 5 ವರ್ಷಗಳಾಯಿತು. ಚಾಸಾ-14 ನನ್ನ ಚಿಕ್ಕಮ್ಮ. ಮೃತ ಅಬುತಾಲಿಬ್ ನನಗೆ ಗೊತ್ತು, ಅವರು ನಮ್ಮ ಕಾಲೋನಿಯವರು. ಚಾಸಾ-1 ಮೃತ ಅಬುತಾಲಿಬ್ ರವರ ಹೆಂಡತಿ. ಚಾಸಾ-19 ಮೃತ ಅಬುತಾಲಿಬ್ ರವರ ಮಗ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಆತ ಚಾಸಾ-14 ರವರ ಪಕ್ಕದ ಮನೆಯವನು. ಆತ ಕೆಲಸಕ್ಕಾಗಿ ವಿದೇಶಗಳಿಗೆ ಹೋಗುತ್ತಿದ್ದನು ಹಾಗೂ ವರ್ಷಕ್ಕೆ ಒಂದೆರೆಡು ಬಾರಿ ಊರಿಗೆ ಬಂದು ಹೋಗುತ್ತಿದ್ದ. ಈ ಪ್ರಕರಣ ದಾಖಲಾಗುವ ಸಮಯದಲ್ಲಿ ಆತ 3 ತಿಂಗಳಿನಿಂದ ಊರಿನಲ್ಲಿಯೇ ಇದ್ದ. ನಮ್ಮ ಏರಿಯಾದಲ್ಲಿ ನೀರಿನ ತೊಂದರೆ ಇದ್ದುದ್ದರಿಂದ, ನಮ್ಮ ಏರಿಯಾದವರೆಲ್ಲರೂ ಚಾಸಾ-14 ರವರ ಮನೆಯಲ್ಲಿದ್ದ ಬಾವಿಯಿಂದ ನೀರನ್ನು ತರಲು, ಬಟ್ಟೆ ತೊಳೆಯಲು, ಸ್ನಾನ ಮಾಡಲು ಹೋಗುತ್ತಿದ್ದರು. ಅದೇ ರೀತಿ ನಾವು ಸಹ ಅವರ ಮನೆಗೆ ನೀರನ್ನು ತರಲು, ಬಟ್ಟೆ ತೊಳೆಯಲು, ಸ್ನಾನ ಮಾಡಲು ಹೋಗುತ್ತಿದ್ದೆವು.

2. ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಅನೇಕ ಬಾರಿ ನಾನು ಚಾಸಾ-14 ರವರ ಮನೆಗೆ ನೀರು ತರಲು ಹಾಗೂ ಬಟ್ಟೆ ತೊಳೆಯಲು ಹೋದಾಗ, ಆರೋಪಿ ತನ್ನ ಮನೆಯ ಹತ್ತಿರ ನಿಂತುಕೊಂಡು, ನನಗೆ ಕೈ ಸನ್ನೆ ಮಾಡಿ, ಬಾ ಎಂದು ಕರೆಯುವುದು, ಕಣ್ಣು

ಹೊಡೆಯುವುದನ್ನು ಮಾಡುತ್ತಿದ್ದ ಮತ್ತು ಅಸಭ್ಯವಾಗಿ ವರ್ತಿಸುತ್ತಿದ್ದ. ಆದರೆ ಈ ವಿಷಯವನ್ನು ನಾನು ನನ್ನ ಗಂಡನ ಬಳಿ ಹೇಳಿರುವುದಿಲ್ಲ, ಅದಲ್ಲದೇ ನಮ್ಮ ಏರಿಯಾದ ಹೆಂಗಸರಿಗೂ ಸಹ ಆರೋಪಿ ಅದೇ ರೀತಿ ಮಾಡುತ್ತಿದ್ದ. ಆರೋಪಿಯ ವರ್ತನೆಯನ್ನು ನಾವು ಹೆಂಗಸರುಗಳು ಮಾತನಾಡಿಕೊಳ್ಳುತ್ತಿದ್ದೆವು. ಈ ಪ್ರಕರಣದ ಘಟನೆ ನಡೆಯುವ 13 ದಿನಗಳ ಹಿಂದೆ ಆರೋಪಿ ಚಾಸಾ-14 ರವರ ಕೈ ಹಿಡಿದು ಎಳೆದಾಡಿ, ತನ್ನ ಗುಪ್ತಾಂಗವನ್ನು ತೋರಿಸಿ, ಕಿರುಕುಳ ನೀಡಿದ್ದ. ಈ ಬಗ್ಗೆ ಚಾಸಾ-14 ರವರು ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಆರೋಪಿಯ ವಿರುದ್ದ ದೂರನ್ನು ದಾಖಲಿಸಿರುವ ವಿಷಯ ನನಗೆ ಚಾಸಾ-14 ರವರಿಂದ ಗೊತ್ತಾಯಿತು.

3. ದಿಃ 03-05-2021 ರಂದು ಬೆಳಿಗ್ಗೆ 11-00 ಗಂಟೆಗೆ ನಾನು ಚಾಸಾ-14 ರವರ ಮನೆಗೆ ಬಟ್ಟೆ ತೊಳೆಯಲು ಹೋಗಿದ್ದೆ. ಸುಮಾರು 11-30 ಗಂಟೆ ಸಮಯದಲ್ಲಿ ನಾನು ಚಾಸಾ-14 ರವರ ಮನೆಯ ಕಂಪೌಂಡಿನಲ್ಲಿ ಬಟ್ಟೆ ತೊಳೆಯುತ್ತಿದ್ದಾಗ, ಆರೋಪಿ ತನ್ನ ಮನೆಯ ಕಂಪೌಂಡಿನಲ್ಲಿ ನನ್ನ ಎದುರಿಗೆ ನಿಂತು, ತನ್ನ ಲುಂಗಿಯನ್ನು ಎತ್ತಿ, ಗುಪ್ತಾಂಗವನ್ನು ತನ್ನ ಕೈಯಲ್ಲಿ ಮುಟ್ಟಿ , ಅಸಭ್ಯವಾಗಿ ವರ್ತಿಸುತ್ತಿದ್ದ ಹಾಗೂ ಕೈ ಸನ್ನೆ ಮಾಡಿ, ಬಾ ಎಂದು ಕರೆಯುತ್ತಿದ್ದ. ಆರೋಪಿಯ ವರ್ತನೆಯಿಂದ ನನಗೆ ಗಾಬರಿಯಾಗಿ, ಕೂಗಿಕೊಂಡಾಗ ಚಾಸಾ-14 ರವರು ನಾನು ಬಟ್ಟೆ ತೊಳೆಯುತ್ತಿದ್ದ ಜಾಗಕ್ಕೆ ಬಂದಾಗ, ಆರೋಪಿ ಅಲ್ಲಿಯೇ ನಿಂತುಕೊಂಡು ಅಸಭ್ಯವಾಗಿ ವರ್ತಿಸುತ್ತಿದ್ದ. ಆ ನಂತರ ಆರೋಪಿ ವರ್ತನೆಯಿಂದ ಗಾಬರಿಯಾಗಿ ನಾನು ನಮ್ಮ ಮನೆಗೆ ಬಂದು, ನನ್ನ ಗಂಡನ ಬಳಿ ಆರೋಪಿ ಮಾಡುತ್ತಿದ್ದ ಕೃತ್ಯದ ಬಗ್ಗೆ ಹೇಳಿದೆ. ಆಗ ನನ್ನ ಗಂಡ ಈ ವಿಷಯವನ್ನು ನಾವು ನಮ್ಮ ಏರಿಯಾದ ಹಿರಿಯರಾದ ಅಬುತಾಲಿಬ್ ರವರ ಬಳಿ ಹೇಳಿ, ಆರೋಪಿಗೆ ಬುದ್ದಿವಾದ ಹೇಳಿಸೋಣ ಎಂದು ಹೇಳಿದರು. ನಂತರ ನಾನು, ನನ್ನ ಗಂಡ ಇಬ್ಬರೂ ಸೇರಿ ಸುಮಾರು 12-30 ಗಂಟೆಗೆ ಅಬುತಾಲಿಬ್ ರವರ ಮನೆಗೆ ಹೋಗಿ, ಆರೋಪಿಯ ವರ್ತನೆಯ ಬಗ್ಗೆ ಹೇಳಿದ್ದು, ಆ ಸಮಯದಲ್ಲಿ ಅವರ ಮನೆಯಲ್ಲಿ ಆತನ ಹೆಂಡತಿ ಮತ್ತು ಮಕ್ಕಳೂ ಸಹ ಇದ್ದರು.

4. ನಾವು ಅಬುತಾಲಿಬ್ ರವರಿಗೆ ವಿಷಯವನ್ನು ಹೇಳಿದ ನಂತರ ಅಬುತಾಲಿಬ್ ರವರು ಆರೋಪಿಯನ್ನು ವಿಚಾರಿಸೋಣ ಎಂದು ಸುಮಾರು 12-45 ಗಂಟೆಗೆ ಅಬುತಾಲಿಬ್, ಆತನ ಹೆಂಡತಿ ಮತ್ತು ಮಕ್ಕಳು, ನಾನು ಮತ್ತು ನನ್ನ ಗಂಡ ಎಲ್ಲರೂ ಸೇರಿ, ಆರೋಪಿಯ ಮನೆ ಕಡೆಗೆ ಹೊರಟು, ನಾವೆಲ್ಲರೂ ಚಾಸಾ-14 ರವರ ಮನೆಯ ಮುಂದುಗಡೆ ರಸ್ತೆಗೆ ಬಂದಾಗ,

ಮದ್ಯಾಹ್ನ 01-00 ಗಂಟೆ ಸಮಯದಲ್ಲಿ ಆರೋಪಿ ಅದೇ ರಸ್ತೆಯ ಮೇಲೆ ಎದುರಿಗೆ ಸಿಕ್ಕಿದ್ದು, ಆತನಿಗೆ ಅಬುತಾಲಿಬ್ ರವರು ವಿಚಾರಿಸುತ್ತಿದ್ದಾಗ, ನಾನು ಚಾಸಾ-14 ರವರನ್ನು ಕರೆಯಲು, ಅವರ ಮನೆಗೆ ಹೋಗಿ, ಅವರನ್ನು ಮನೆಯಿಂದ ಕರೆದುಕೊಂಡು ಮುಂದಿನ ರಸ್ತೆಗೆ ಬಂದಾಗ, ಅಬುತಾಲಿಬ್ ರವರು ಆರೋಪಿಗೆ "ಯಾಕೆ ಈ ರೀತಿ ನಮ್ಮ ಏರಿಯಾದ ಹೆಂಗಸರಿಗೆ ತೊಂದರೆ ಕೊಡುತ್ತೀಯಾ ಹಾಗೂ ಅಂಜುಂಗೆ ಯಾಕೆ ಲುಂಗಿ ಎತ್ತಿ ತೋರಿಸಿ, ಅಸಭ್ಯವಾಗಿ ವರ್ತಿಸಿದ್ದೀಯಾ" ಎಂದು ಕೇಳಿದಾಗ, ಆರೋಪಿ ಅಬುತಾಲಿಬ್ ರವರಿಗೆ "ಇದನ್ನೆಲ್ಲಾ ಕೇಳುವುದಕ್ಕೆ ನೀನು ಯಾರು ? ರಾಂಡಕೆ ಬೇಟೆ "ಎಂದು ಹೇಳಿದ್ದು, ಅದಕ್ಕೆ ಅಬುತಾಲಿಬ್ ರವರು ಆರೋಪಿಗೆ, "ನೀನು ಇದೇ ರೀತಿ ಹೆಂಗಸರಿಗೆ ತೊಂದರೆ ಕೊಟ್ಟರೆ, ನಿನ್ನ ಮೇಲೆ ಪೊಲೀಸರಿಗೆ ದೂರು ನೀಡಿ, ನಿನ್ನನ್ನು ಜೈಲಿಗೆ ಹಾಕಿಸಬೇಕಾಗುತ್ತದೆ" ಎಂದು ಹೇಳಿರುತ್ತಾರೆ. ಆಗ ಆರೋಪಿ ಅಬುತಾಲಿಬ್ ರವರಿಗೆ "ರಾಂಡಕೆ ಬೇಟೆ, ಬೇರೆ ಹೆಂಗಸರ ವಿಷಯದಲ್ಲಿ ಬರುವುದಕ್ಕೆ ನೀನು ಯಾರು? ನಿನಗೆ ತೋರಿಸುತ್ತೇನೆ" ಎಂದು ಹೇಳಿ, ತನ್ನ ಮನೆಯ ಕಡೆಗೆ ಹೋದ. ಅಲ್ಲಿ ಚಾಸಾ-11 ಮತ್ತು 12 ರವರು ಸ್ಥಳದಲ್ಲಿದ್ದರು, ಆಗ ಆರೋಪಿ ತನ್ನ ಮನೆಯಿಂದ ಒಂದು ಚಾಕುವನ್ನು ತೆಗೆದುಕೊಂಡು ಬಂದನು. ಆ ಸಮಯದಲ್ಲಿ ನನ್ನ ಗಂಡ ಚಾಸಾ-14 ರವರ ಮನೆಯ ಕಂಪೌಂಡಿನಲ್ಲಿ ನಿಂತು, ತನ್ನ ಮೊಬೈಲ್ ನಿಂದ ವಿಡಿಯೋ ಮಾಡುತ್ತಿದ್ದರು. ಚಾಕು ತಂದ ನಂತರ ಆರೋಪಿ ಅಬುತಾಲಿಬ್ ರವರಿಗೆ ಚಾಕುವನ್ನು ತೋರಿಸಿ, "ಈ ದಿನ ನಿನ್ನನ್ನು ಕೊಲೆ ಮಾಡುತ್ತೇನೆ" ಎಂದು ಹೇಳುತ್ತಿದ್ದಾಗ, ಅಲ್ಲಿಯೇ ಇದ್ದ ಚಾಸಾ-11 ಮತ್ತು 12 ರವರು ಆರೋಪಿಗೆ ಸಮಾಧಾನ ಮಾಡುತ್ತಿದ್ದರು. ಆದರೂ ಸಹ ಆರೋಪಿ ಅಬುತಾಲಿಬ್ ರವರಿಗೆ ಚಾಕುವಿನಿಂದ ಹಲ್ಲೆ ಮಾಡಲು ಮುಂದೆ ಬಂದಾಗ, ಅಬುತಾಲಿಬ್ ರವರು ಅಲ್ಲಿಯೇ ಬಿದ್ದಿದ್ದ ಅಡಿಕೆ ಮರದ ದಬ್ಬೆಯನ್ನು ತೆಗೆದುಕೊಂಡು, ಆರೋಪಿಯ ಕೈಯಲ್ಲಿದ್ದ ಚಾಕುವನ್ನು ಬೀಳಿಸಲು, ಆತ ಚಾಕು ಹಿಡಿದಿದ್ದ ಕೈಗೆ ಹೊಡೆದಿದ್ದು, ಆದರೆ ಚಾಕು ಕೆಳಗೆ ಬಿದ್ದಿರುವುದಿಲ್ಲ. ಆದರೆ ಆರೋಪಿ ಅಬುತಾಲಿಬ್ ರವರಿಗೆ ನಿನ್ನನ್ನು ರಾಂಡ್ ಕೆ ಬೇಟಾ, ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ, ಎಂದು ಹೇಳಿ, ತನ್ನ ಕೈಯಲ್ಲಿದ್ದ ಚಾಕುವಿನಿಂದ ಅಬುತಾಲಿಬ್ ರವರ ಎದೆಗೆ ಚುಚ್ಚಿದ್ದು, ಅವರ ಎದೆಯಿಂದ ಬಹಳ ರಕ್ತ ಹೊರಗೆ ಬಂದು, ಅವರು ಅಲ್ಲಿಯೇ ಕಳೆಗೆ ಬಿದ್ದರು ಹಾಗೂ ರಕ್ತ ನೆಲದ ಮೇಲೆ ಹಾಗೂ ಅವರ ಮೈ ಮೇಲೆ ಬಿದ್ದಿರುತ್ತದೆ. ಆ ನಂತರ ಆರೋಪಿ ತನ್ನ ಕೈಯಲ್ಲಿದ್ದ ಚಾಕುವನ್ನು ಹಿಡಿದುಕೊಂಡು ತನ್ನ ಮನೆಯ ಕಡೆಗೆ ಹೋದನು. ಈ ಘಟನೆ ನಡೆಯುವಾಗ ನಾನು, ಚಾಸಾ-14 ಹಾಗೂ ಅಬುತಾಲಿಬ್ ರವರ ಹೆಂಡತಿ ಚಾಸಾ-1

ರವರು ಹಾಗೂ ಇತರರು ಅಲ್ಲಿಯೇ ರಸ್ತೆಯಲ್ಲಿ ನಿಂತಿದ್ದೆವು. ಆಗ ಸಮಯ ಮದ್ಯಾಹ್ನ 01–15 ಗಂಟೆ ಆಗಿರುತ್ತದೆ. ಆ ದಿನ ಅಬುತಾಲಿಬ್ ರವರು ಪಿಂಕ್ ಬಣ್ಣದ ಅಂಗಿ ಮತ್ತು ಪಿಂಕ್ ಬಣ್ಣದ ಲುಂಗಿಯನ್ನು ಧರಿಸಿದ್ದರು. ಅದೇ ರೀತಿ ಆರೋಪಿಯೂ ಸಹ ನೀಲಿ ಬಣ್ಣದ ಅಂಗಿ, ಬಿಳಿ ಮತ್ತು ಕಪ್ಪು ಬಣ್ಣದ ಚೌಕಾಕಾರದ ಲುಂಗಿಯನ್ನು ಧರಿಸಿದ್ದನು.

5. ಘಟನೆಯ ನಂತರ ಚಾಸಾ–1 ಹಾಗೂ ಅವರ ಮಕ್ಕಳು ಮತ್ತು ಅಲ್ಲಿಯೇ ಇದ್ದ ಚಾಸಾ–13 ರವರು ಸೇರಿ ಚಾಸಾ–16 ರವರ ಆಟೋ ರಿಕ್ಷಾದಲ್ಲಿ ಅಬುತಾಲಿಬ್ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ನಂತರ ಅಬುತಾಲಿಬ್ ರವರು ಮೃತಪಟ್ಟಿರುತ್ತಾರೆಂದು ಮದ್ಯಾಹ್ನ ಸುಮಾರು 1–50 ಗಂಟೆಗೆ ನನಗೆ ವಿಷಯ ತಿಳಿಯಿತು. ಅದಲ್ಲದೆ ನನ್ನ ಗಂಡ ತನ್ನ ಮೊಬೈಲ್‌ನಲ್ಲಿ ಘಟನೆಯ ದೃಶ್ಯಗಳನ್ನು ವಿಡಿಯೋವನ್ನು ಮಾಡಿದ್ದನ್ನು, ನನಗೆ ತೋರಿಸಿದ್ದು, ಅದನ್ನು ನಾನು ನೋಡಿರುತ್ತೇನೆ. ಈ ವಿಷಯದ ಕುರಿತು ನಾನು ದಿಃ 04–05–2021 ರಂದು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಅದೇ ದಿನ ಪೊಲೀಸರಿಗೆ ನಾನು ಚಾಸಾ–14 ರವರ ಮನೆಯ ಕಂಪೌಂಡಿನಲ್ಲಿ ಬಟ್ಟೆ ತೊಳೆಯುವ ಕಲ್ಲನ್ನು ಹಾಗೂ ಆರೋಪಿ ತನ್ನ ಮನೆಯ ಕಂಪೌಂಡಿನಲ್ಲಿ ನಿಂತು ಅಸಭ್ಯವಾಗಿ ವರ್ತಿಸುತ್ತಿದ್ದ ಸ್ಥಳವನ್ನು ತೋರಿಸಿರುತ್ತೇನೆ. ಅಲ್ಲಿ ಪೊಲೀಸರು ಬೆಳಿಗ್ಗೆ 11–00 ರಿಂದ 12–00 ಗಂಟೆಯ ವರೆಗೆ ಜಹೀರ್ ಹಾಗೂ ಇಮಾಮ್ ಸಾಬ್ ಎಂಬುವರ ಸಮಕ್ಷಮದಲ್ಲಿ ಪಂಚನಾಮೆಯನ್ನು ಮಾಡಿ, ಫೋಟೋಗಳನ್ನು ತೆಗೆದರು. ಸದರಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–24 ಎಂದು, ಸಾಕ್ಷಿಯ ಸಹಿಯನ್ನು ನಿಪಿ–24(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ 2 ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–25 ಮತ್ತು 26 ಎಂದು ಗುರುತಿಸಲಾಯಿತು.

6. ಆ ನಂತರ 2021 ರ ಜುಲೈ ತಿಂಗಳಲ್ಲಿ ನಾನು ಹೊನ್ನಾವರದ ನ್ಯಾಯಾಲಯದಲ್ಲಿ ಘಟನೆಯ ಸಂಬಂಧ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನು ನಿಪಿ–27 ಎಂದು , ಸಾಕ್ಷಿಯ ಸಹಿಯನ್ನು ನಿಪಿ–27(ಎ) ಎಂದು ಗುರುತಿಸಲಾಯಿತು. ನಿಪಿ–12 ಫೋಟೊದಲ್ಲಿ ಮೃತ ಅಬುತಾಲಿಬ್ ರವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು–1 ಆರೋಪಿಯ ಅಂಗಿ, ಮುದ್ದ ಮಾಲು–3 ಆರೋಪಿಯ ಲುಂಗಿ, ಮುದ್ದೆ ಮಾಲು–2 ಚಾಕು, ಮುದ್ದೆ ಮಾಲು–8 ಅಬುತಾಲಿಬ್ ರವರ ಲುಂಗಿ,

ಮುದ್ದೆ ಮಾಲು-9 ಅಬುತಾಲಿಬ್ ರವರ ಅಂಗಿ, ಮುದ್ದೆ ಮಾಲು-7 ಅಡಿಕೆ ದಬ್ಬೆ, ಮುದ್ದೆ ಮಾಲು-11 ತನ್ನ ಗಂಡನ ಮೊಬೈಲ್, ಇವುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಮುದ್ದೆ ಮಾಲು-11 ಮೊಬೈಲ್ ನಲ್ಲಿದ್ದ ಈ ಪ್ರಕರಣಕ್ಕೆ ಸಂಬಂಧಿಸಿದ ದೃಶ್ಯಾವಳಿಯನ್ನು ಈಗ ಸಾಕ್ಷಿಗೆ ತೋರಿಸಿದ್ದು, ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೃಶ್ಯಾವಳಿಯು ಸ್ಪಷ್ಟವಾಗಿ ಕಾಣುತ್ತಿರುತ್ತದೆ ಹಾಗೂ ಕೇಳುತ್ತಿರುತ್ತದೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಎಲ್.ಎ.ಡಿ.ಸಿ ವಕೀಲರಿಂದ**

7. ನನಗೆ ಕನ್ನಡ ಓದಲು-ಬರೆಯಲು ಬರುತ್ತದೆ. ನಮ್ಮ ಮನೆಯಿಂದ 4-5 ಮನೆಗಳು ಬಿಟ್ಟು, ಚಾಸಾ-14 ರವರ ಮನೆ ಇರುತ್ತದೆ. ಚಾಸಾ-14 ರವರ ಮನೆಯ ಬಳಿ ಹಿಂದೂ ಜನರ ಮನೆಗಳು ಇರುತ್ತವೆ ಎಂದರೆ ಸರಿ. ನಮ್ಮ ಮನೆಯಲ್ಲಿ ನಾನು, ನನ್ನ ಗಂಡ, ಅತ್ತೆ-ಮಾವ, ನನ್ನ ಮೈದುನ, ನಾದಿನಿ ಹಾಗೂ ಆಕೆಯ ಗಂಡ ಮತ್ತು ಮಕ್ಕಳು ಇರುತ್ತೇವೆ. ನಾನು ಮದುವೆಯಾದಗಿನಿಂದಲೂ ಅಂದರೆ 5 ವರ್ಷಗಳಿಂದ ನಮ್ಮ ಮನೆಯಲ್ಲಿ ನೀರಿನ ಸಮಸ್ಯೆಯಾದರೆ, ಚಾಸಾ-14 ರವರ ಮನೆಗೆ ನೀರು ತರಲು, ಬಟ್ಟೆ ತೊಳೆಯಲು ಹಾಗೂ ಸ್ನಾನ ಮಾಡಲು ಹೋಗುತ್ತಿರುತ್ತೇವೆ. ಆರೋಪಿಯ ವರ್ತನೆಯ ಬಗ್ಗೆ ಕಳೆದ 5 ವರ್ಷಗಳಿಂದ ನಾನಾಗಲೀ ಅಥವಾ ಇತರೇ ಹೆಂಗಸರಾಗಲೀ ದೂರನ್ನು ನೀಡಿಲ್ಲ ಎಂದರೆ ಸಾಕ್ಷಿಯು ಚಾಸಾ-14 ರವರು ದೂರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-14 ರವರು ದೂರು ನೀಡುವ ಪೂರ್ವದಲ್ಲಿ ನಮ್ಮ ಏರಿಯಾದವರು ಯಾರು ದೂರು ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿಯನ್ನು ಕಂಡರೆ ಊರಿನ ಜನರು ಹೆದರುತ್ತಿದ್ದರು ಎಂದು ನುಡಿಯುತ್ತಾರೆ. ಈ ವಿಷಯವನ್ನು ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ.

8. ಚಾಸಾ-14 ರವರಿಗೂ ಹಾಗೂ ಆರೋಪಿಯ ನಡುವೆ ಜಗಳವಾಗುತ್ತಿತ್ತು ಎಂದರೆ ಸರಿಯಲ್ಲ. ಅದೇ ರೀತಿ ಅವರ ನಡುವೆ ವೈರತ್ವ ಇತ್ತು ಎಂದರೆ ಸಾಕ್ಷಿಯು ಆರೋಪಿಯ ವರ್ತನೆಯಿಂದ ವೈರತ್ವ ಇತ್ತು ಎಂದು ನುಡಿಯುತ್ತಾರೆ. ಚಾಸಾ-14 ರವರ ಮನೆಗೆ ಬಹಳಷ್ಟು ಜನರು ಬಂದು ಹೋಗುತ್ತಿದ್ದರು ಹಾಗೂ ಈ ವಿಷಯವಾಗಿ ಆರೋಪಿ ಆಕ್ಷೇಪಣೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಈ ಕಾರಣದಿಂದ ಅವರಿಬ್ಬರ ನಡುವೆ ವೈರತ್ವ ಇತ್ತು ಎಂದರೆ ಸರಿಯಲ್ಲ. ಚಾಸಾ-14 ರವರ ಮನೆಗೆ ಬಹಳಷ್ಟು ಜನರು ಬಂದು ಹೋಗುತ್ತಿದ್ದರೂ ಸಹ ಆಕೆ ನನ್ನ

ಚಿಕ್ಕಮ್ಮನಾದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–14 ರವರ ಮನೆಯ ಕಂಪೌಂಡಿನಲ್ಲಿ ಬಟ್ಟೆ ತೊಳೆಯುವ ಜಾಗದಲ್ಲಿ ಬಹಳಷ್ಟು ಗಿಡ ಮರುಗಳು ಇರುತ್ತವೆ ಎಂದರೆ ಸಾಕ್ಷಿಯು ಒಂದು ತೆಂಗಿನ ಮರ ಹಾಗೂ ಸಣ್ಣ ಗಿಡಗಳು ಇರುತ್ತವೆ ಎಂದು ನುಡಿಯುತ್ತಾರೆ. ಬಟ್ಟೆ ತೊಳೆಯುವ ಜಾಗದಿಂದ ಆರೋಪಿಯ ಮನೆ ಕಾಣುವುದಿಲ್ಲ ಎಂದರೆ ಸರಿಯಲ್ಲ. ನಿಪಿ–25 ಪೋಟೋದಲ್ಲಿ ಕಾಣುತ್ತಿರು ಹಸಿರು ಮನೆ ಆರೋಪಿಯ ಮನೆ ಎಂದರೆ ಸರಿ. ಸದರಿ ಪೋಟೋವನ್ನು ಸಾಕ್ಷಿಗೆ ತೋರಿಸಿ, ಆರೋಪಿಯ ಮನೆಯ ಪಕ್ಕದಲ್ಲಿ ಗಿಡಗಳು ಕಾಣುತ್ತವೆ ಎಂದರೆ ಸಾಕ್ಷಿಯು ಸಣ್ಣ ಗಿಡಗಳು ಕಾಣುತ್ತವೆ ಎಂದು ನುಡಿಯುತ್ತಾರೆ. ನಿಪಿ–25 ಪೋಟೋದಲ್ಲಿ ಆರೋಪಿಯ ಮನೆ ಕಾಣುವುದಿಲ್ಲ ಎಂದರೆ ಸರಿಯಲ್ಲ. ನಿಪಿ–25 ಪೋಟೋದಲ್ಲಿ ಕಾಣುತ್ತಿರುವ ಗಿಡಗಳು ಇರುವುದರಿಂದ ಆರೋಪಿ ಮನೆಯ ಕಂಪೌಂಡಿನಲ್ಲಿದ್ದವರು ಕಾಣುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಜಾಗವನ್ನು ತೋರಿಸಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.

9. ನನ್ನ ಗಂಡ ಆಟೋ ಚಾಲಕನಾಗಿದ್ದು, ಬೆಳಿಗ್ಗೆ ಆಟೋ ತೆಗೆದುಕೊಂಡು ಹೋದರೆ ಸಂಜೆ ಬರುತ್ತಾರೆ ಎಂದರೆ ಸಾಕ್ಷಿಯು ಆಗಾಗ್ಗೆ ಬಂದು ಹೋಗುತ್ತಾರೆ ಎಂದು ನುಡಿಯುತ್ತಾರೆ. ಈ ಪ್ರಕರಣ ನಡೆಯುವ ಸಮಯದಲ್ಲಿ ನನ್ನ ಬಳಿ ಮೊಬೈಲ್ ಇರುವುದಿಲ್ಲ. ನನ್ನ ಗಂಡನ ಬಳಿ ಯಾವಾಗಲೂ ಮೊಬೈಲ್ ಇರುತ್ತಿತ್ತು ಎಂದರೆ ಸರಿ. ನಾನು ಕೂಗಿಕೊಂಡಾಗ ಚಾಸಾ–14 ರವರು ಮನೆಯ ಹೊರಗೆ ಬಂದು ನೋಡಿರುತ್ತಾರೆ ಎಂದು, ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ. ನಾನು ಮತ್ತು ನನ್ನ ಗಂಡ ಇಬ್ಬರೂ ಅಬುತಾಲಿಬ್ ರವರ ಮನೆಗೆ ಹೋಗಿ, ವಿಷಯ ತಿಳಿದ ಬಗ್ಗೆ ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ. ಆದರೆ ಪೊಲೀಸರು ಅದನ್ನು ನಮೂದಿಸಿರುವುದಿಲ್ಲ. ನಾನು ಚಾಸಾ–14 ರವರ ಬಳಿ ಹೇಳಿದ ವಿಷಯವನ್ನೂ ಸಹ ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ.

10. ನಾನು ಮತ್ತು ನನ್ನ ಗಂಡ ಅಬುತಾಲಿಬ್ ರವರ ಮನೆಗೆ ಹೋದಾಗ ಅಲ್ಲಿ ಏನೇನು ಮಾತುಕತೆಯಾಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಗಲಾಟೆ ನಡೆಯುವಾಗ ಸುಮಾರು 30–40 ಜನರು ಸೇರಿದ್ದರು. ಅಲ್ಲಿ ಸೇರಿದ್ದ ಜನರು ಗುಂಪಾಗಿ ಸೇರಿದ್ದರು ಎಂದರೆ

ಸಾಕ್ಷಿಯು ಎಲ್ಲರೂ ಒಂದು ಕಡೆ ಸೇರಿದ್ದರು ಎಂದು ನುಡಿಯುತ್ತಾರೆ. ಜಗಳವಾಗುತ್ತಿದ್ದ ಸ್ಥಳದಿಂದ 30 ಅಡಿ ದೂರದಲ್ಲಿ ನಾನು ನಿಂತಿದ್ದೆ. ನಾವು ನಿಂತಿದ್ದ ಜಾಗದಲ್ಲಿ ನಮ್ಮ ಮುಂದುಗಡೆ ಬಹಳಷ್ಟು ಜನರು ನಿಂತಿದ್ದರು ಎಂದರೆ ಸಾಕ್ಷಿಯು ಎಲ್ಲರೂ ಪಕ್ಕದಲ್ಲಿ ನಿಂತಿದ್ದರು ಎಂದು ನುಡಿಯುತ್ತಾರೆ. ಗಲಾಟೆ ಸಮಯದಲ್ಲಿ ನಾವು ನಿಂತ ಸ್ಥಳದಲ್ಲಿ ಗಿಡ ಮರಗಳು ಇದ್ದವು ಎಂದರೆ ಸಾಕ್ಷಿಯು ಸಣ್ಣ-ಸಣ್ಣ ಗಿಡಗಳಿರುತ್ತವೆ ಎಂದು ನುಡಿಯುತ್ತಾರೆ. ಅಲ್ಲಿ ತೆಂಗಿನ ಮರಗಳ ಗರಿಗಳು ಇದ್ದುದ್ದರಿಂದ ನಮಗೆ ಸರಿಯಾಗಿ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

11. ನನ್ನ ಗಂಡ ವಿಡಿಯೋ ಮಾಡಿರುವುದನ್ನ, ನಾವು ಮನೆಗೆ ಬಂದ ನಂತರ ತೋರಿಸಿರುತ್ತಾರೆ. ಸದರಿ ವಿಡಿಯೋವನ್ನು ಪೊಲೀಸರಿಗೆ ತೋರಿಸಿದ್ದೀರಾ ಎಂದರೆ ಸಾಕ್ಷಿಯು ನಾನು ತೋರಿಸಿರುವುದಿಲ್ಲ, ಆದರೆ ನನ್ನ ಗಂಡ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿನ್ನ ಗಂಡ ಸದರಿ ವಿಡಿಯೋವನ್ನು ಪೊಲೀಸರಿಗೆ ಅದೇ ದಿನ ತೋರಿಸಿದರಾ? ಎಂದರೆ ಸಾಕ್ಷಿಯು ಯಾವಾಗ ತೋರಿಸಿದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ಯಾವುದೇ ವಿಡಿಯೋವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಗಂಡ ಅಬುತಾಲಿಬ್ ರವರ ಮನೆಗೆ ಹೋದ ವಿಷಯವನ್ನು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ. ನಾನು ಅಬುತಾಲಿಬ್ ರವರ ಮನೆಗೆ ಹೋಗದೆ ಇದ್ದರೂ ಸಹ ಇದೇ ಮೊದಲ ಬಾರಿಗೆ ಹೋಗಿದ್ದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೊನ್ನಾವರ ನ್ಯಾಯಾಲಯದಲ್ಲಿ ಹೇಳಿಕೆ ನೀಡುವಾಗ, ನನ್ನ ಗಂಡ ವಿಡಿಯೋ ಮಾಡಿರುವುದರ ಬಗ್ಗೆ ಹೇಳಿರುತ್ತೇನೆ. ಸದರಿ ಹೇಳಿಕೆಯಲ್ಲಿ ನನ್ನ ಗಂಡ ಅಬುತಾಲಿಬ್ ರವನ್ನು ಕರೆದುಕೊಂಡು ಬರಲು ಹೋದರು, ನಾನು ಮನೆಗೆ ಹೋದೆ ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಎಂದಿಗೂ ತನ್ನ ಲುಂಗಿಯನ್ನು ಎತ್ತಿ, ಗುಪ್ತಾಂಗವನ್ನು ತೋರಿಸಿ ಕೈಯಲ್ಲಿ ಮುಟ್ಟಿ , ಕೈ ಸನ್ನೆ ಮಾಡಿ, ಅಸಭ್ಯವಾಗಿ ವರ್ತಿಸಿಲ್ಲ ಎಂದರೆ ಸರಿಯಲ್ಲ. ಅಬುತಾಲಿಬ್ ರವರೇ ಮೊದಲು ಆರೋಪಿಗೆ ಹೊಡೆದಿರುತ್ತಾರೆ ಎಂದರೆ ಸಾಕ್ಷಿಯು ಚಾಕು ಬೀಳಲಿ ಎಂದು ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಚಾಕು ಬೀಳಲಿ ಎಂದು ಹೊಡೆದಿಲ್ಲ ಹಾಗೂ ಆತನನ್ನು ಕೊಲೆ ಮಾಡುವ ಉದ್ದೇಶದಿಂದ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿ ತನ್ನ ರಕ್ಷಣೆಗಾಗಿ ಅಬುತಾಲಿಬ್ ರವನ್ನು ದೂಡಿದ ಎಂದರೆ ಸರಿಯಲ್ಲ. ಆರೋಪಿ ದೂಡಿದ್ದರಿಂದ ಕೆಳಗೆ ಬಿದ್ದು ಅಬುತಾಲಿಬ್ ರವರು ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-14 ರವರು ಚಿಕ್ಕಮ್ಮನಾದ ಕಾರಣ ಅವರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಮುದ್ದೆ ಮಾಲು–11 ರಲ್ಲಿರುವ ವಿಡಿಯೋವನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ–24 ರಂತೆ ಪಂಚನಾಮೆ ಮಾಡಿಲ್ಲ, ನಿಪಿ–25 ಮತ್ತು 26 ರಂತೆ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.

12. ಅಬುತಾಲಿಬ್ ಸಿಟ್ಟಿನ ಸ್ವಭಾವದ ವ್ಯಕ್ತಿ ಎಂದರೆ ಸರಿಯಲ್ಲ. ಆತನ ವಿರುದ್ದ ಕೊಲೆ ಪ್ರಕರಣ ಹಾಗೂ ಆತನ ಹೆಂಡತಿಯನ್ನು ಜೀವಂತ ಸುಡುವ ಪ್ರಯತ್ನದ ಪ್ರಕರಣ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ಪ್ರಕರಣಗಳು ನನಗೆ ಗೊತ್ತಿದ್ದರೂ ಸಹ ಚಾಸಾ–14 ರವರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಬುತಾಲಿಬ್ ರವರು ದಪ್ಪ ದೊಣ್ಣೆಯಿಂದ ಆರೋಪಿಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ